ಇಷ್ಟು ಹೊತ್ತಲ್ಲಿ ಮೆಸೇಜ್ ಮಾಡಿದ್ರು ಉತ್ತರ ಕೊಡಲ್ವ? ಯಾಕೆ ನನ್ನ ಮೇಲೆ ಕೋಪಾನಾ?" ಎನ್ನುವ ಮೆಸೇಜು!

ಪ್ರಣತಿಗೆ ತಡೆಯಲಾಗಲಿಲ್ಲ, ''ಹೇ ಮಿಸ್ಟರ್, ಅಪರಿಚಿತ ವ್ಯಕ್ತಿಗಳೊಂದಿಗೆ ಚಾಟ್ ಮಾಡಲು ನನಗೆ ಇಷ್ಟವಿಲ್ಲ. ನಿಮಗ್ಯಾಕೆ ಅರ್ಥ ಆಗ್ತಾ ಇಲ್ಲ? ನಿಮಗೆ ಬೇರೆ ಕೆಲಸವಿಲ್ಲವೆ?" ಎಂದುತ್ತರಿಸಿದಳು. ಆ ಕಡೆಯಿಂದ ನಗೆಯ ಎಮೋಜಿಯೊಂದು ಹಾರಿಬಂತು. ಪ್ರಣತಿ ಸಿಟ್ಟಿನ ಎಮೋಜಿಯೊಂದನ್ನು ಕಳಿಸಿದಳು. ಈಗ ಹೂ ಗುಚ್ಛವೊಂದು ಬಂತು. "ನಿಮ್ಮನ್ನು ಕಾಡಿಸುವುದೆಂದರೆ ನನಗೆ ಬಹಳ ಇಷ್ಟ ಪ್ರಣತಿಯವರೆ" ಎನ್ನುವ ಮೆಸೇಜು ಬೇರೆ. "ನೀವು ಹೆಣ್ಣುಮಕ್ಕಳು ಫೇಸ್‌ಬುಕ್‌ನಂತಹ ಆಪ್‌ಗೆ ಬರೋದೇನೋ ಬರ್ತೀರಿ, ಫ್ರೆಂಡ್‌ಶಿಪ್ ರಿಕ್ವೆಸ್ಟ್‌ಗೂ ಓಕೆ ಅಂತಿರಿ. ಆದರೆ ಫ್ರೆಂಡ್ಸ್ ಜೊತೆ ಚಾಟ್ ಮಾಡಕ್ಕೆ ಮಾತ್ರಾ ಹೆದರ್ತೀರಿ, ಇದೇ ನನಗೆ ಅರ್ಥವಾಗಲ್ಲ. ಚಾಟ್ ಮಾಡಿದ ಮಾತ್ರಕ್ಕೆ ನಾನೇನು ನಿಮ್ಮನ್ನ ತಿಂದುಬಿಡ್ತೀನಾ? ಕಮ್ ಆನ್ ಪ್ರಣತಿಯವರೆ" ಎಂದನವ.

ಪ್ರಣತಿಗೇಕೋ ಇದು ಅತಿಯಾಯಿತು ಎನಿಸಿತು. "ಸ್ಟಾಪ್ ಇಟ್ ಮಿಸ್ಟರ್! ಫೇಸ್‌ಬುಕ್ ಬಳಸೋದು ಕಂಡ ಕಂಡ ಗಂಡಸರ ಜೊತೆ ಅರ್ಥವಿಲ್ಲದ ಚಾಟ್ ಮಾಡಕ್ಕಲ್ಲ. ದಿಸ್ ಈಸ್ ಟೂ ಮಚ್. ಅಷ್ಟಕ್ಕೂ ನನಗಿಷ್ಟವಿಲ್ಲವೆಂದ ಮೇಲೆ ನೀವೇಕೆ ಪದೆ ಪದೆ ಮೆಸೇಜ್ ಕಳಿಸಿ ಇರ್ರಿಟೇಟ್ ಮಾಡ್ತೀರಿ?'' ಎಂದು ಗರಂ ಆಗೇ ಟೈಪಿಸಿದಳು. "ಅರೇ, ನೀವೀಗ ನಿಜಕ್ಕೂ ನನ್ನ ಮೆಲೆ ಸಿಟ್ಟು ಮಾಡಿಕೊಂಡು ಬಿಟ್ಟರಿ. ಏನೋ ಒಂದೇ ಸಮನೆ ಯಂತ್ರದ ಹಾಗೇ ಸುತ್ತೋ ಈ ಬದುಕಲ್ಲಿ ಸ್ವಲ್ಪವಾದರೂ ಎಂಟರ್‌ಟೈನ್‌ಮೆಂಟ್ ಇರಲಿ ಅಂದುಕೊಂಡು ನಿಮ್ಮಂತ ಸ್ನೇಹಿತರ ಜೊತೆ ಚಾಟ್ ಮಾಡಿದ್ರೆ ನೀವದನ್ನೇ ಸೀರಿಯಸ್ಸಾಗಿ ತಗೋತಾ ಇದ್ದೀರಿ. ಆದರೂ ಒಂದು ಮಾತು ಪ್ರಣತಿ, ನೀವು ಬಹಳಾ ಕನ್ಸರ್ವೇಟಿವ್ ಅಂದ್ರೆ ಅದೇ ಪೂರ್ವಕಾಲದ ಪುಟ್ಟಮ್ಮನ ಥರಾ ಅನಿಸತ್ತೆ ಹಾ ಹಾ ಹಾ."

"ಹೌದು ನಾನು ಕೆಲವು ವಿಷಯಗಳಲ್ಲಿ ಪೂರ್ವಕಾಲದ ಪುಟ್ಟಮ್ಮನೇ. ಈಗಿನ ಸೋ ಕಾಲ್ಡ್ ಬೋಲ್ಡ್ ಅಂಡ್ ಬಿಂದಾಸ್ ಹೆಣ್ಣು ನಾನು ಅಂತ ನೀನಂದುಕೊಂಡಿದ್ರೆ ಅದು ನಿನ್ನ ತಪ್ಪು."

"ಓಓಓ ಕೂಲ್ ಕೂಲ್ ಡೌನ್. ಚಾಟ್ ಮಾಡಿದ ಮಾತ್ರಕ್ಕೆ ನಿನ್ನ ಪಾವಿತ್ರ್ಯ ಹೊರಟು ಹೋಗತ್ತಾ?"

ಮಾತು ಏಕವಚನಕ್ಕಿಳಿದದ್ದು ಪ್ರಣತಿಗೆ ತಿಳಿಯಲೇ ಇಲ್ಲ.

"ನೋಡು ಚಾಟ್ ಮಾಡಿದ ಮಾತ್ರಕ್ಕೆ ಹೆಣ್ಣಿನ ಪಾವಿತ್ರ್ಯ ಹೋಗತ್ತಾ ಅಂತ ಬಹಳ ದೊಡ್ಡ ಪ್ರಶ್ನೆ ಕೇಳ್ತಾ ಇದ್ದೀಯಲ್ಲ. ಅಲ್ಲಿ ನಿನ್ನ ಪಕ್ಕದಲ್ಲಿ ನಿನ್ನ ಹೆಂಡತಿಯೇನಾದ್ರೂ ಕೂತಿದ್ರೆ ಇದೇ ಪ್ರಶ್ನೆ ಅವಳನ್ನೂ ಕೇಳು. ಉತ್ತರ ಅಲ್ಲೇ ಸಿಗತ್ತೆ" ಎಂದು ಮೆಸೇಜಿಸಿದಳು. ಏನಿವನ ಅರ್ಥ? ಇಂದು ಮಾತಿಗೆಳೆಯುವುದು, ನಾಳೆ ಮೊಬೈಲ್ ನಂಬರ್ ಕೇಳುವುದು, ನಾಳಿದ್ದು ಭೇಟಿಗೆತ್ನಿಸುವುದೇ ಇಂತಹವರ ಹುನ್ನಾರ ಎಂದು ತಿಳಿಯದ ಮುಗ್ಧೆಯೇನಲ್ಲ ಪ್ರಣತಿ. ವಾರದ ಹಿಂದಷ್ಟೇ ಗೆಳತಿ ಶಾಲಿನಿ ಹೀಗೇ ಒಬ್ಬನ ಜೊತೆ ಗೆಳೆತನ ಮುಂದುವರೆಸಿ ಆಕೆಯ ಗಂಡನ ಕಣ್ಣು ಕೆಂಗಣ್ಣಾಗಿದ್ದು. ಅಲ್ಲದೆ, ಭೇಟಿಯಾಗಲು ಬಂದ ಅವ ಸಲಿಗೆ ತೆಗೆದುಕೊಳ್ಳಲು ಪ್ರಯತ್ನಿಸಿದ್ದಾಗಿಯೂ ಅವಳು ಹೇಳಿಕೊಂಡು ಅತ್ತಿದ್ದು ನೆನಪಾಯಿತು.

ಸೋಷಿಯಲ್ ನೆಟ್‌ವರ್ಕ್‌ನಲ್ಲಿರುವ ಹೆಣ್ಣುಮಕ್ಕಳೆಲ್ಲ ಅಪರಿಚಿತ ಗಂಡಸರ ಜೊತೆಗೆ ಸ್ನೇಹ ಬಯಸಲು ಹಪಾಹಪಿಸುತ್ತಿರುತ್ತಾರೆಂದು ಈ ಗಂಡಸರೇಕೆ ತಿಳಿಯುತ್ತಾರೋ. ಹೆಂಗಸರೆಂದರೆ